## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** ಸಕಾಲ ಕಾಯಿದೆಯಡಿಯಲ್ಲಿ ಮೇಲ್ಮನವಿ ಅರ್ಜಿಗಳನ್ನು ಆನ್-ಲೈನ್ ಮೂಲಕವೂ ಸಹ ಇತ್ಯರ್ಥ ಪಡಿಸುವುದರ ಬಗ್ಗೆ ಹಾಗೂ ಅಪೀಲ್ ವಿಚಾರಣಾ ಸಂದರ್ಭದಲ್ಲಿ ಅಪೀಲುದಾರರು ಸಲ್ಲಿಸಿದ ದಾಖಲಾತಿಗಳ ಹಾರ್ಡ್ ಪ್ರತಿಯನ್ನು ಪಡೆಯುವ ಬದಲಾಗಿ ಆಡಳಿತ ಇಲಾಖೆಯ ತಂತ್ರಾಂಶದಿಂದಲೇ Pull ಮಾಡಿ ಪರಿಶೀಲಿಸುವುದರ ಕುರಿತು.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 20 ಇಕಾಅ 2012, ದಿನಾಂಕ:06.03.2012.

*****

**ಪ್ರಸ್ತಾವನೆ:-**

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಕಾಲ ಮಿಷನ್ ಅನ್ನು ರಚಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014 ರ ಕಲಂ 12(1) ರನ್ವಯ ಕಲಂ 10ನೇ ಮತ್ತು 11ನೇ ಪ್ರಕರಣಗಳಿಗೆ ಅನುಸಾರವಾಗಿ ಸಕ್ಷಮ ಅಧಿಕಾರಿಯು ಹೊರಡಿಸಿರುವ ಆದೇಶದಿಂದ ಬಾಧಿತನಾದ ಯಾವೊಬ್ಬ ಸಾರ್ವಜನಿಕ-ನೌಕರನು ಪ್ರಶ್ನಿತ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳಿಗೆ ಮೀರದ ಅವಧಿಯೊಳಗೆ ಅಂಥ ಆದೇಶದ ವಿರುದ್ಧ ಮೇಲ್ಮನವಿ ಪ್ರಾಧಿಕಾರಕ್ಕೆ ಒಂದು ಮೇಲ್ಮನವಿಯನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು ಹಾಗೂ ಕಲಂ 13 (1) ರನ್ವಯ ಯೊವೊಬ್ಬ ವ್ಯಕ್ತಿಯ ಅರ್ಜಿಯನ್ನು 5ನೇ ಪ್ರಕರಣದ 2ನೇ ಉಪ ಪ್ರಕರಣದ ಅಡಿಯಲ್ಲಿ ತಿರಸ್ಕರಿಸಲಾಗಿದೆಯೋ ಅಥವಾ ಗೊತ್ತುಮಾಡಿದ ಕಾಲಮಿತಿಯೊಳಗೆ ಆತನಿಗೆ ಸೇವೆಯನ್ನು ಒದಗಿಸಿಲ್ಲವೋ ಆ ವ್ಯಕ್ತಿಯು, ಅರ್ಜಿಯನ್ನು ತಿರಸ್ಕರಿಸಿದ ದಿನಾಂಕದಿಂದ ಅಥವಾ ಗೊತ್ತುಮಾಡಿದ ಕಾಲಮಿತಿಯು ಮುಕ್ತಾಯಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಕ್ಷಮ ಅಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು.

ಕರ್ನಾಟಕ ಸಕಾಲ ಸೇವೆಗಳ ನಿಯಮಗಳು, 2012ರ ನಿಯಮ 13 (2) ರಂತೆ ಮೇಲ್ಮನವಿ ಇತ್ಯರ್ಥಕ್ಕೆ ಮೇಲ್ಮನವಿದಾರರು ಖುದ್ದಾಗಿ ಅಥವಾ ಅವರಿಂದ ಪ್ರಾಧಿಕೃತನಾದ ವ್ಯಕ್ತಿಯ ಭೌತಿಕ ಹಾಜರಾತಿಯನ್ನು ಕೋರುತ್ತಿರುವುದು ಚಾಲನೆಯಲ್ಲಿದೆ. ಇದರಿಂದ ಅರ್ಜಿದಾರರಿಗೆ ಮೇಲ್ಮನವಿ ಹಾಕಲು ಪ್ರೇರಣೆ ದೊರಕುತ್ತಿಲ್ಲ. ಅಲ್ಲದೇ **ಅಪೀಲುದಾರರಿಗೆ ಹಲವಾರು ಸಂದರ್ಭಗಳಲ್ಲಿ, ಮೇಲ್ಮನವಿ ವಿಚಾರಣೆಗೆ ನಿಗದಿತ ದಿನಾಂಕ ಮತ್ತು ಸಮಯದಲ್ಲಿ ಭೌತಿಕವಾಗಿ ಹಾಜರಾಗಲು ಸಾಧ್ಯವಾಗದಿರುವುದನ್ನು ಗಮನಿಸಲಾಗಿದೆ.** ಇದರಿಂದಾಗಿ ಸಕಾಲದಲ್ಲಿ ಮೇಲ್ಮನವಿಗಳ ಬಾಕಿ ಹೆಚ್ಚಾಗಿದೆ. ಆದ್ದರಿಂದ ಮೇಲ್ಮನವಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಹಾಗೂ ಅರ್ಜಿದಾರರು ಹೆಚ್ಚಿನ ಸಂಖ್ಯೆಯಲ್ಲಿ ಅಪೀಲು ಹಾಕಲು ಪ್ರೇರಣೆ ನೀಡಲು ಸಕಾಲ ಕಾಯಿದೆಯಡಿಯಲ್ಲಿನ ಸಕ್ಷಮ ಪ್ರಾಧಿಕಾರ (ಮೊದಲನೇ ಮೇಲ್ಮನವಿ ಪ್ರಾಧಿಕಾರ) ಮತ್ತು ಮೇಲ್ಮನವಿ ಅಧಿಕಾರಿಗಳಿಗೆ (ಎರಡನೇ ಮೇಲ್ಮನವಿ ಪ್ರಾಧಿಕಾರ) ಮೇಲ್ಮನವಿಗಳ ವಿಲೇವಾರಿಗಾಗಿ ಆನ್‌ಲೈನ್ ವೀಡಿಯೊ ಕಾನ್ಫರೆನ್ಸಿಂಗ್ ಪ್ಲಾಟ್‌ಫಾರ್ಮ್‌ಗಳನ್ನು ಬಳಸಿಕೊಳ್ಳುವಂತೆ ಸೂಚಿಸಲು ಪ್ರಸ್ತಾಪಿಸಲಾಗಿದೆ.

ಅಲ್ಲದೇ, ಆನ್-ಲೈನ್ ಮೇಲ್ಮನವಿಗಳ ಯಶಸ್ವಿ ವಿಲೇವಾರಿಗಾಗಿ ನಿಯಮ 13(1)ರಂತೆ ಮೇಲ್ಮನವಿ ವಿಚಾರಣೆಯ ದಿನಾಂಕವನ್ನು ಕನಿಷ್ಠ 7 ದಿನಗಳ ಮುಂಚಿತವಾಗಿ ಅರ್ಜಿದಾರರಿಗೆ ಹಾಗೂ ಹೆಸರಿಸಲಾದ ಅಧಿಕಾರಿಗೆ ಅಥವಾ ಸಂದರ್ಭಾನುಸಾರವಾಗಿ ಸಕ್ಷಮ ಅಧಿಕಾರಿಗೆ SMS ಮೂಲಕ ತಿಳಿಸುವುದು ಮತ್ತು ಅದೇ ಸಂವಹನವು (SMS) ಆನ್-ಲೈನ್ ವಿಚಾರಣೆ ಲಿಂಕ್ ಅನ್ನು ಸಹ ಒಳಗೊಂಡಿರಬೇಕು. ಆನ್-ಲೈನ್ ಮೇಲ್ಮನವಿ ವಿಚಾರಣೆ ಪ್ರಕ್ರಿಯೆಗೆ ಹಾಜರಿರಲು ವಿಚಾರಣೆಯ ದಿನಾಂಕ ಹಾಗೂ ಸಮಯದ ಮಾಹಿತಿಯನ್ನು ನಿಯಮಾನುಸಾರ ತಿಳಿಸಿದ ನಂತರವೂ ಅರ್ಜಿದಾರರು/ ಸಂಬಂಧಪಟ್ಟ ಅಧಿಕಾರಿ ವಿಚಾರಣೆಯ ದಿನಾಂಕದಂದು ಆನ್-ಲೈನ್ ಮೂಲಕವು ಸಹಾ ಗೈರುಹಾಜರಾದಲ್ಲಿ ಅಂತಹ ಪ್ರಕರಣಗಳಲ್ಲಿ ನಿಯಮ 13(3)ರಂತೆ ಮೇಲ್ಮನವಿಯನ್ನು exparte ಯಾಗಿ ನಿರ್ಧರಿಸಬಹುದು. ಈ ಸೌಲಭ್ಯವು ಸಕಾಲ ಕಾಯಿದೆಯಡಿಯಲ್ಲಿ ಮೇಲ್ಮನವಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಅಪೀಲುಗಳನ್ನು ದಾಖಲಿಸಲು ಸಹ ನಾಗರೀಕರಿಗೆ ಪ್ರೇರಣೆ ಮತ್ತು ಅನುವು ಮಾಡಿಕೊಡುತ್ತದೆ.

ಮುಂದುವರೆದು, ಸಕ್ಷಮ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರದ ಅಧಿಕಾರಿಗಳು ಮೇಲ್ಮನವಿ ಅರ್ಜಿಗಳ ವಿಚಾರಣೆ ನಡೆಸುವ ಸಂದರ್ಭದಲ್ಲಿ ಅಪೀಲುದಾರರಿಂದ ಯಾವುದೇ ದಾಖಲಾತಿಗಳ ಹಾರ್ಡ್ ಪ್ರತಿಯನ್ನು ಪಡೆಯುವ ಬದಲಾಗಿ ಆಡಳಿತ ಇಲಾಖೆಯ ತಂತ್ರಾಂಶದಿಂದಲೇ ಅಪೀಲುದಾರರು ಸಲ್ಲಿಸಿರುವ ದಾಖಲೆಗಳನ್ನು Pull ಮಾಡಿ ಪರಿಶೀಲಿಸುವುದರ ಮೂಲಕ ಎರಡೂ ಪಕ್ಷದವರು ಯಾವುದೇ false claim ಮಾಡಲು ಅವಕಾಶವಿಲ್ಲದಿರುವುದರಿಂದ ಅಪೀಲ್ ಪ್ರಾಧಿಕಾರವು ಶೀಘ್ರವಾಗಿ ಅಪೀಲ್ ಇತ್ಯರ್ಥ ಮಾಡಬಹುದು.

ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 48 ಎಸ್ಎಂಎಸ್ 2023,</u>**
**<u>ಬೆಂಗಳೂರು. ದಿನಾಂಕ:16.01.2024.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014 ಮತ್ತು ಕರ್ನಾಟಕ ಸಕಾಲ ಸೇವೆಗಳ ನಿಯಮಗಳು 2012 ರ ಅಡಿಯಲ್ಲಿ ಅಧಿಸೂಚಿತ ಸೇವೆಗಳ ವಿತರಣೆಗೆ ಸಂಬಂಧಿಸಿದಂತೆ ಸಾರ್ವಜನಿಕ ನೌಕರರು/ಬಾಧಿತ ನಾಗರೀಕರಿಂದ ಸಲ್ಲಿಸಲ್ಪಡುವ ಮೇಲ್ಮನವಿಗಳ ವಿಲೇವಾರಿಯಲ್ಲಿ ಅಪೀಲುದಾರರಿಗೆ ಹಲವಾರು ಸಂದರ್ಭಗಳಲ್ಲಿ, ಮೇಲ್ಮನವಿ ವಿಚಾರಣೆಗೆ ನಿಗದಿತ ದಿನಾಂಕ ಮತ್ತು ಸಮಯದಲ್ಲಿ ಭೌತಿಕವಾಗಿ ಹಾಜರಾಗಲು ಸಾಧ್ಯವಾಗದಿರುವುದನ್ನು ಗಮನಿಸಲಾಗಿದೆ. **ಆದ್ದರಿಂದ ಕರ್ನಾಟಕ ಸಕಾಲ ಸೇವೆಗಳ ನಿಯಮಗಳು, 2012ರ ನಿಯಮ 13ರನ್ವಯ ಸಕಾಲ <u>ಮೇಲ್ಮನವಿಗಳನ್ನು ಆನ್-ಲೈನ್ ಮೂಲಕವೂ ಸಹ ವಿಚಾರಣೆಗೆ ಪರಿಗಣಿಸತಕ್ಕದ್ದು</u>.**

ಮುಂದುವರೆದು ಅಪೀಲ್ ವಿಚಾರಣೆಯ ಸಂದರ್ಭದಲ್ಲಿ ಎರಡೂ ಪಕ್ಷದವರು ಯಾವುದೇ false claim ಮಾಡಲು ಅವಕಾಶ ನೀಡದಿರಲು ಹಾಗೂ ಇದರಿಂದ ಅಪೀಲ್ ಪ್ರಾಧಿಕಾರವು ಶೀಘ್ರವಾಗಿ ಅಪೀಲ್ ಇತ್ಯರ್ಥ ಮಾಡಲು ಅನುವಾಗುವಂತೆ ಸಕ್ಷಮ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರದ ಅಧಿಕಾರಿಗಳು ಮೇಲ್ಮನವಿ ಅರ್ಜಿಗಳ ವಿಚಾರಣೆ ನಡೆಸುವ ಸಂದರ್ಭದಲ್ಲಿ ಅಪೀಲುದಾರರಿಂದ ಯಾವುದೇ ದಾಖಲಾತಿಗಳ ಹಾರ್ಡ್ ಪ್ರತಿಯನ್ನು ಪಡೆಯುವ ಬದಲಾಗಿ ಆಡಳಿತ ಇಲಾಖೆಯ ತಂತ್ರಾಂಶದಿಂದಲೇ ಅಪೀಲುದಾರರು ಸಲ್ಲಿಸಿರುವ ದಾಖಲೆಗಳನ್ನು Pull ಮಾಡಿ ಪರಿಶೀಲಿಸತಕ್ಕದ್ದು. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್.ಡಿ 07 ಟಿ.ಎಫ್.ಪಿ 2023, ದಿನಾಂಕ: 31.07.2023ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರಗಳನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kavitha

**(ಕವಿತ ಎಸ್. ಗೌಡ)**
ಆಡಳಿತಾಧಿಕಾರಿ
ಸಕಾಲ ಮಿಷನ್
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ(ಇ-ಆಡಳಿತ)

**ಪ್ರತಿ:-**

1. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು- ತಮ್ಮ ಅಧೀನದ ಎಲ್ಲಾ ಕಛೇರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇಲಾಖೆ (ಇ-ಆಡಳಿತ) ಇವರ ಆಪ್ತ ಶಾಖೆಗೆ ಮಾಹಿತಿಗಾಗಿ.
3. ಹೆಚ್ಚುವರಿ ಪ್ರತಿಗಳು/ ಶಾಖಾ ರಕ್ಷಾ ಕಡತ.